


# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್


### ಛಾಯಾಚಿತ್ರ ೨೮



ಛಾಯಾಚಿತ್ರ ೨೮

**ಸ್ವಾ**ಮಿ ವಿವೇಕಾನಂದರು ೧೮೯೯, ಜೂನ್ ೨೦ ರಂದು ಎರಡನೆಯ ಬಾರಿ ವಿದೇಶಪ್ರಯಾಣ ಮಾಡಲು ಹೊರಟಿದ್ದರು. ಅಂದು ಶ್ರೀಮಾತೆ ಶಾರದಾದೇವಿಯವರು ಕೊಲ್ಕತಾದ ಬೋಸಪಾರಾ ಲೇನ್‌ನಲ್ಲಿ ಇದ್ದ ತಮ್ಮ ನಿವಾಸದಲ್ಲಿ ವಿಶೇಷ ಔತಣವೊಂದನ್ನು ಏರ್ಪಡಿಸಿದ್ದರು. ಸ್ವಾಮಿ ವಿವೇಕಾನಂದರನ್ನು ಮತ್ತು ಸ್ವಾಮಿ ತುರೀಯಾನಂದರನ್ನು ಶ್ರೀಮಾತೆಯವರು ಅಂದು ತುಂಬು ವಾತ್ಸಲ್ಯದಿಂದ ಉಪಚರಿಸಿದರು. ಬಳಿಕ ಅವರಿಬ್ಬರೂ ಶ್ರೀಮಾತೆಯವರ ವಿಶೇಷ ಆಶೀರ್ವಾದವನ್ನು ಪಡೆದುಕೊಂಡರು. ಮಧ್ಯಾಹ್ನ ಮೂರು ಗಂಟೆಯ ಸಮಯಕ್ಕೆ ಕುದುರೆಗಾಡಿಯಲ್ಲಿ ಕುಳಿತು, ಹಡಗನ್ನು ಹತ್ತಲು ಬಂದರಿನ ಕಡೆಗೆ ಹೊರಟರು.

ಈ ಚಿತ್ರವನ್ನು ಶ್ರೀಮಾತೆಯವರ ವಿಳಾಸದಲ್ಲಿ ತೆಗೆಯಲಾಯಿತು. ಇದರಲ್ಲಿ ಇರುವವರ ಪರಿಚಯ ಹೀಗಿದೆ: **(ಎಡದಿಂದ)** ಸ್ವಾಮಿ ತ್ರಿಗುಣಾತೀತಾನಂದ, ಸ್ವಾಮಿ ಶಿವಾನಂದ, ಸ್ವಾಮಿ ವಿವೇಕಾನಂದ, ಸ್ವಾಮಿ ತುರೀಯಾನಂದ, ಸ್ವಾಮಿ ಬ್ರಹ್ಮಾನಂದ, **(ಕೆಳಗೆ ಕುಳಿತವರು) :** ಸ್ವಾಮಿ ಸದಾನಂದ



ಛಾಯಾಚಿತ್ರ ೨೯

### ಛಾಯಾಚಿತ್ರ ೨೯

ಈ ಚಿತ್ರವು ಮೇಲಿನ ಚಿತ್ರದಿಂದ (ಛಾಯಾಚಿತ್ರ ೨೮) ಬೇರ್ಪಡಿಸಿದ ಭಾಗವಾಗಿದೆ. ೧೮೯೯, ಜೂನ್ ೨೦ರಂದು ಸ್ವಾಮಿ ವಿವೇಕಾನಂದರು ಮತ್ತು ಸ್ವಾಮಿ ತುರೀಯಾನಂದರು ಬಂದರನ್ನು ತಲುಪಿದಾಗ, ಹಲವಾರು ಜನ ಅವರಿಗೆ ವಿದಾಯ ಹೇಳಲು ಅಲ್ಲಿ ಸೇರಿದ್ದರು. ಸ್ವಾಮೀಜಿ ಕೂಡ ಬಹಳ ಆನಂದದ ಭಾವದಲ್ಲಿ ಇದ್ದರು. ಅಲ್ಲದೆ, ಇತರರಿಗೂ ಹಸನ್ಮುಖಿಗಳಾಗಿ ಇರುವಂತೆ ಹೇಳಿದರು.

ಭಗಿನಿ ನಿವೇದಿತಾ ಕೂಡ ಸ್ವಾಮೀಜಿಯೊಡನೆ ಅಂದು ಪ್ರಯಾಣ ಮಾಡಿದಳು. ಆಕೆ ಆಗ ಶ್ರೀಮಾತೆಯವರ ಜೊತೆಗೇ ವಾಸಿಸುತ್ತಿದ್ದಳು. ಪ್ರಯಾಣಕ್ಕೆ ಎರಡು ದಿನಗಳ ಮುಂದೆ, ಅಂದರೆ ೧೮೯೯, ಜೂನ್ ೧೮ರಂದು ಸ್ವಾಮಿ ಸದಾನಂದ ಮತ್ತು ಶ್ರೀ ಮೋಹಿನಿಮೋಹನ್ ಚಟರ್ಜಿ ಜೊತೆಗೂಡಿ ಆಕೆ ಬೇಲೂರು ಮಠಕ್ಕೆ ಭೇಟಿಕೊಟ್ಟಿದ್ದಳು. ಮಠದಲ್ಲಿ ಆಕೆಯನ್ನು ಬೀಳ್ಕೊಡುವ ಸಂಕೇತವಾಗಿ ಚಹಾಪಾನ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿತ್ತು. ಅಂದು ಸ್ವಾಮಿ ಸದಾನಂದರು ಭಗನಿ ನಿವೇದಿತೆಯೊಡನೆ ಶ್ರೀಮಾತೆಯವರ ಗೃಹಕ್ಕೆ ವಾಪಸ್ಸು ಬಂದರು. ಸ್ವಾಮಿ ಸದಾನಂದರು ಆ ಅವಧಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿಯೇ ಇದ್ದರು ಎನ್ನುವುದು ಇದರಿಂದ ನಮಗೆ ಗೊತ್ತಾಗುತ್ತದೆ.

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

ಎಚ್. ವಿ. ಸರೋಜ

( *ಹಿಂದಿನ ಸಂಚಿಕೆಯಿಂದ* )



**ಗು**ರುಗಳಿಂದ ಮಂತ್ರವನ್ನು ಸ್ವೀಕರಿಸಿದ ರಾಮಾನುಜರಿಗೆ ಒಂದು ಯೋಚನೆ ಬಂದಿತು: "ಇಂತಹ ಜ್ಞಾನವು ಕೆಲವರಿಗೆ ಮಾತ್ರ ಏಕೆ ಸೀಮಿತವಾಗಿರಬೇಕು? ಎಲ್ಲರೂ ತಿಳಿದು ಧನ್ಯರಾಗಲಿ." ಈ ರೀತಿ ಯೋಚಿಸಿ, ಮಾರನೆಯ ದಿನ ಗೋಷ್ಠೀಪುರದ ದೊಡ್ಡ ದೇವಸ್ಥಾನವಾದ ನರಸಿಂಹ ದೇವಸ್ಥಾನದ ಗೋಪುರವನ್ನು ಏರಿ ನಿಂತರು; ನಗರದ ಜನಗಳನ್ನೆಲ್ಲ ಸೇರಿಸಿದರು. ತಾವು ರಹಸ್ಯವಾಗಿ ಪಡೆದಿದ್ದ ಮಂತ್ರವನ್ನು ಅವರೆಲ್ಲರಿಗೂ ಉಪದೇಶಿಸಿದರು. ನೆರೆದಿದ್ದ ಜನರೆಲ್ಲರೂ ಈ ಮಂತ್ರವನ್ನು ಉಚ್ಚರಿಸಿದರು; ಅದರ ಅಂತರಾರ್ಥವನ್ನು ತಿಳಿದು ಆನಂದಗೊಂಡರು.

ಈ ವಿಚಾರ ಗೋಷ್ಠೀಪೂರ್ಣರಿಗೆ ತಿಳಿಯಿತು. ಅವರು ಕೋಪದಿಂದ ಕೆಂಡಾಮಂಡಲವಾದರು. ರಾಮಾನುಜರನ್ನು ಕರೆಸಿ ಕೇಳಿದರು, "ಈ ಅಪರಾಧದ ಫಲವೇನು, ಗೊತ್ತೇ?" ರಾಮಾನುಜರು ಶಾಂತಚಿತ್ತದಿಂದ ಉತ್ತರಿಸಿದರು, "ಗುರುವಿನ ಮಾತು ಮೀರಿದ್ದಕ್ಕೆ ನನಗೆ ನರಕ ಪ್ರಾಪ್ತಿಯಾಗುತ್ತದೆ." ಅದಕ್ಕೆ ಗೋಷ್ಠೀಪೂರ್ಣರು ಹೇಳಿದರು, "ಗೊತ್ತಿದ್ದೂ ಏಕೆ ಈ ತಪ್ಪು ಮಾಡಿದೆ?" ಅದಕ್ಕೆ ರಾಮಾನುಜರು ಹೀಗೆ ನುಡಿಯುತ್ತಾರೆ: "ನಾನೊಬ್ಬನೇ ನರಕಕ್ಕೆ ಹೋಗುವುದರಿಂದ, ಇಷ್ಟೊಂದು ಜನಕ್ಕೆ ಮೋಕ್ಷ ಪ್ರಾಪ್ತಿಯಾಗುವುದಲ್ಲವೇ! ಆದ್ದರಿಂದ ಅವರಿಗಾಗಿ ನಾನು ಈಗಲೇ ನರಕಕ್ಕೆ ಹೋಗಲು ಸಿದ್ಧನಿದ್ದೇನೆ." ಒಡನೆ ಗೋಷ್ಠೀಪೂರ್ಣರು ರಾಮಾನುಜರನ್ನು ಅಪ್ಪಿಕೊಂಡು ಹೇಳಿದರು, "ನೀನು ನನ್ನ ಕಣ್ಣು ತೆರೆಸಿದೆ. ನಾನು ನಿನ್ನ ಗುರುವಾಗಲು ಯೋಗ್ಯನಲ್ಲ. ನೀನೇ ನನ್ನನ್ನು ನಿನ್ನ ಶಿಷ್ಯನನ್ನಾಗಿ ಸ್ವೀಕರಿಸು." ಅದಕ್ಕೆ ರಾಮಾನುಜರು ಅವರನ್ನು ಸಮಾಧಾನಪಡಿಸುತ್ತ ಹೀಗೆ ಹೇಳಿದರು: "ನಾನು ನಿಮ್ಮ ಮಗನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತೇನೆ." ಆಗ ಗೋಷ್ಠೀಪೂರ್ಣರು ಅವರನ್ನು ಆಶೀರ್ವದಿಸಿ, **'ನನ್ನ ಸ್ವಾಮಿಯೇ?!'** ಎಂದು ಕರೆದರು. ಗೋಷ್ಠೀಪುರದ ನರಸಿಂಹ ದೇವಸ್ಥಾನದಲ್ಲಿ, ಶ್ರೀರಾಮಾನುಜರು ಅಷ್ಟಾಕ್ಷರೀ ಮಂತ್ರವನ್ನು ಉಪದೇಶ ಮಾಡಿದ ಸ್ಮರಣಾರ್ಥವಾಗಿ, 'ಉಪದೇಶ ಮುದ್ರೆ'ಯಲ್ಲಿ ಇರುವ ಅವರ ಒಂದು ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ತದನಂತರ, ರಾಮಾನುಜರು, 'ಗದ್ಯತ್ರಯ', 'ನಿತ್ಯಗ್ರಂಥ' ಮತ್ತು 'ಭಗವದ್ಗೀತಾಭಾಷ್ಯ' ಎಂಬ ಮೂರು ಮುಖ್ಯ ಗ್ರಂಥಗಳನ್ನು ರಚಿಸಿದರು. ಭಗವಂತನ ಅನುಗ್ರಹವನ್ನು ಪಡೆಯಲು ಗಾಢವಾದ ಸಾಧನೆಯಲ್ಲಿ ತೊಡಗಿದರು.

### ತಿರುಪತಿ ಯಾತ್ರೆ

ಶ್ರೀರಾಮಾನುಜಾಚಾರ್ಯರು ಒಮ್ಮೆ ತಿರುಪತಿಯ ಬೆಟ್ಟವನ್ನು ಹತ್ತಲು ಹೊರಟರು. ಆದರೆ ಅವರಿಗೆ ಕಾಲುಗಳನ್ನು ಮೆಟ್ಟಿಹತ್ತಲು ಸಾಧ್ಯವಾಗಲೇ ಇಲ್ಲ. ಇದಕ್ಕೆ ಕಾರಣ ಇಡೀ ಬೆಟ್ಟವು ಅವರಿಗೆ ಶೇಷದೇವರ ರೂಪದಂತೆ ಕಂಡುಬಂದಿತು. ಅದನ್ನು ಹೇಗೆ ತಾನೇ ತುಳಿಯುವುದು? ಬೆಟ್ಟದ ಬುಡದಲ್ಲಿಯೇ ನಿಂತು ಅಲ್ಲಿಂದಲೇ, "ಶ್ರೀನಿವಾಸ, ಗೋವಿಂದ" ಎಂದು ಅಡ್ಡಬಿದ್ದರು. ಅಲ್ಲದೆ, ಹೀಗೆ ಕೀರ್ತನೆ ಮಾಡಿದರು:

**ಲೋಕವನುಂಡ ಹಿರಿಯಬಾಯುಳ್ಳವನೇ**
**ಎಂದೆಂದೂ ತೀರದಿಹ ಕೀರ್ತಿಯುಳ್ಳವನೇ**
**ಎನ್ನುಸಿರೆ, ಲೋಕಂಗಳಿಗೆ ತಿಲಕದೊಲು ನಿಂತ**
**ಸಿರಿವೆಂಕಟ, ಹಿರಿದೈವವೇ, ನಿನ್ನಡಿಗಳನು**
**ನಂಬಿದರು, ಹಿರಿಯರೆನ್ನಯ ಕುಲದವರು**
**ಅರುಹು ಈಗ, ನಿನ್ನಡಿಗಳನು ನಾ ಕೂಡಿಕೊಳ್ಳುವೆನೆಂತು**

ಹೀಗೆ ಹಾಡುತ್ತ ಬೆಟ್ಟದ ಬುಡದಲ್ಲಿಯೇ ನಿಂತುಬಿಟ್ಟರು. ಈ ವಿಚಾರ ಶೈಲಪೂರ್ಣರಿಗೆ ತಿಳಿಯಿತು. ಅವರು ರಾಮಾನುಜರಿಗಿಂತ ವಯಸ್ಸಿನಲ್ಲಿ ಬಹು ದೊಡ್ಡವರು. ಶ್ರೀನಿವಾಸನಲ್ಲಿ ಅವರಿಗೆ ಪರಮಭಕ್ತಿ. ಭಗವಂತನ ಸೇವೆಗೆ ಮುಡುಪಾಗಿಟ್ಟಿದ್ದ ಜೀವ ಅದು. ರಾಮಾನುಜರಿಗೆ ಕೂಡ ಶ್ರೀನಿವಾಸನ ದರ್ಶನ ಮಾಡಿಸಲೇಬೇಕೆಂಬ ಉತ್ಸುಕತೆ ಶೈಲಪೂರ್ಣರಿಗೆ. ಆದರೆ ಯಾರು ಎಷ್ಟೇ ಹೇಳಿದರೂ ಬೆಟ್ಟವನ್ನು ಹತ್ತಲು ರಾಮಾನುಜರು ಒಪ್ಪುತ್ತಲೇ ಇಲ್ಲ. ಕಡೆಗೆ ಶೈಲಪೂರ್ಣರು ಮತ್ತು ರಾಮಾನುಜಾಚಾರ್ಯರ ಜೊತೆಗಿದ್ದವರು, "ನೀವು ಬಾರದೆ ನಾವೂ ಮೇಲೆ ಹತ್ತುವುದಿಲ್ಲ" ಎಂದು ಹಠ ಹಿಡಿದು ಕುಳಿತುಬಿಟ್ಟರು. ಒಂದೆರಡು ದಿನಗಳು ಹೀಗೆಯೇ ಕಳೆದುಹೋದವು. ರಾಮಾನುಜರಿಗೆ ಚಿಂತೆಹತ್ತಿತು. ಆಗ ಅವರು ಪರಿಹಾರಕ್ಕಾಗಿ ಭಗವಂತನನ್ನೇ ಮೊರೆಹೋದರು. "ಶ್ರೀನಿವಾಸ, ನಿನ್ನ ಆಜ್ಞೆ ಏನು?" ಎಂದು ಪ್ರಾರ್ಥಿಸಿದರು. "ಭಗವಂತನಿಗೆ ಅಪಚಾರವಾದರೂ ಪರವಾಗಿಲ್ಲ. ಭಕ್ತರಿಗೆ ತೊಂದರೆಯಾಗುವಂತೆ ನಡೆದುಕೊಳ್ಳಬಾರದು" ಎಂಬರ್ಥ ಬರುವ ಹಾಗೆ ಆದೇಶವಾಯಿತು. ಇದಲ್ಲದೆ ಶೈಲಪೂರ್ಣರು